ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಪಂಚಾಯತ್ ವಿಜಯನಗರ ಜಿಲ್ಲೆ
ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ
ಟಿ.ಬಿ.ಡ್ಯಾಂ ರಸ್ತೆ ಹೊಸಪೇಟೆ-583225
Email:ceozpvijayanagara@gmail.com

Office of the Chief Executive officer
ZillaPanchayathVijayanagara District
DC Office Building
T.B Dam Road Hospet-583225

ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಜಿಪಂವಿ/ಆಡಳಿತ/ಸಿ2/ಗ್ರ/03-ನೇ /2022-23(ಇ-24920) /2768 ದಿನಾಂಕ:16.12.2023

# ಅಧಿಸೂಚನೆ

ವಿಷಯ:- ವಿಜಯನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 22 ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡುವ ಕುರಿತು.

ಉಲ್ಲೇಖ:-
1. ಸರ್ಕಾರದ ಅಧಿಸೂಚನೆ ಸಂಖ್ಯೆ:RDPR 156 GPA 2022 (ಇ) ದಿನಾಂಕ:14.11.2022
2. ಸರ್ಕಾರದ ಆದೇಶ ಸಂಖ್ಯೆ:KPRC-DEV/544/2021 ದಿನಾಂಕ:19.12.2022
3. ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಆ/ಅಭಿವೃದ್ಧಿ/652/2022 ದಿನಾಂಕ: 28.12.2022
4. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 2 ಸೆಹಿಮ 2023 ದಿನಾಂಕ:08.03.2023
5. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೆಹಿಮ 2022 ದಿನಾಂಕ:28.12.2022
6. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಾಗ್ರಂಇ:ಗ್ರಾಪಂ:ಗ್ರಂ.ಸು:2006-07/06 ದಿನಾಂಕ:02.09.2006

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರನ್ವಯ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಸೇವಾ) ನಿಯಮಗಳು-2022ನ್ನು ದಿನಾಂಕ:14.11.2022 ರಂದು ಜಾರಿಗೊಳಿಸಲಾಗಿದೆ.

ಉಲ್ಲೇಖಿತ (2) ಮತ್ತು (3)ರ ಪತ್ರಗಳನ್ವಯ ವಿಜಯನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಒಟ್ಟು 10 ಗ್ರಾಮ ಪಂಚಾಯಿತಿಗಳಿಗೆ ನೂತನವಾಗಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳು ಮಂಜೂರಾಗಿದ್ದು, ಸದರಿ ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಪ್ರಸ್ತುತ ಖಾಲಿ ಇರುವ ಪ್ರತಿ ಗ್ರಾಮ ಪಂಚಾಯತಿ ಗ್ರಂಥಾಲಯಕ್ಕೆ ಒಂದರಂತೆ ಒಟ್ಟು 10 ಹುದ್ದೆಗಳು ಮತ್ತು ರಾಜಿನಾಮೆ, ಗೈರು ಹಾಜರಿ, ನಿವೃತ್ತಿ ಇತರೆ ಕಾರಣಗಳಿಂದ ತೆರವಾದ 12 ಹುದ್ದೆಗಳು ಸೇರಿ **ಒಟ್ಟು 22** ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ದೃಢೀಕರಿಸಿದ ದಾಖಲೆಗಳೊಂದಿಗೆ ಜಿಲ್ಲಾ ಪಂಚಾಯಿತಿ ವಿಜಯನಗರ, ಹೊಸಪೇಟೆ ಕಾರ್ಯಾಲಯದಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 08.01.2024**

**ವಿಜಯನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿವಾರು ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ 22 ಖಾಲಿ ಹುದ್ದೆಗಳಿಗೆ ಉಲ್ಲೇಖ(4), (5) ಮತ್ತು (6) ರಂತೆ ಲಂಬ ಮತ್ತು ಸಮತಲ ಮೀಸಲಾತಿ ನಿಗಧಿಪಡಿಸಿದ ವಿವರ ಈ ಕೆಳಗಿನಂತಿದೆ.**

| ಕ್ರ.ಸಂ | ತಾ.ಪಂ.ಹೆಸರು | ಗ್ರಾ.ಪಂ.ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ಹೆಸರು | ಹುದ್ದೆ ಖಾಲಿಯಾದ ದಿನಾಂಕ | ರೋಸ್ಟರ್ ಬಿಂದು | ಮೀಸಲಾತಿ ವಿವರ |
|---|---|---|---|---|---|
| 1 | ಹರಪನಹಳ್ಳಿ | ಅರಸೀಕೆರೆ | 01.12.2015 | 1 | ಪ.ಜಾ |
| 2 | ಕೂಡ್ಲಿಗಿ | ಹಾರಕಬಾವಿ | 27.05.2017 | 2 | ಸಾ.ಅ |
| 3 | ಕೂಡ್ಲಿಗಿ | ಬಡೇಲಡುಕು | 12.10.2020 | 3 | ಪ.ಪಂ |

ಕಛೇರಿ ಗುಮಾಸ್ತ
ಜಿಲ್ಲಾ ಪಂಚಾಯಿತಿ,
ವಿಜಯನಗರ ಜಿಲ್ಲೆ ಹೊಸಪೇಟೆ 16/12/23

| ಕ್ರ.ಸಂ | ತಾ.ಪಂ.ಹೆಸರು | ಗ್ರಾ.ಪಂ.ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದ ಹೆಸರು | ಹುದ್ದೆ ಖಾಲಿಯಾದ ದಿನಾಂಕ | ರೋಸ್ಟರ್ ಬಿಂದು | ಮೀಸಲಾತಿ ವಿವರ |
|---|---|---|---|---|---|
| 4 | ಹಗರಿಬೊಮ್ಮನಹಳ್ಳಿ | ಬನ್ನಿಕಲ್ಲು | 24.07.2021 | 4 | ಸಾ.ಅ(ಮ. ಅ) |
| 5 | ಹಡಗಲಿ | ಕಾಲ್ವಿ(ಪಶ್ಚಿಮ) | 08.08.2021 | 5 | ಪ್ರವರ್ಗ-1 |
| 6 | ಹಗರಿಬೊಮ್ಮನಹಳ್ಳಿ | ಬ್ಯಾಸಿಗಿದೇರಿ | 30.11.2021 | 6 | ಸಾ.ಅ(ಗ್ರಾ.ಅ) |
| 7 | ಕೊಟ್ಟೂರು | ದೂಪದಹಳ್ಳಿ | 31.07.2022 | 7 | ಪ್ರವರ್ಗ-2(ಎ) |
| 8 | ಹರಪನಹಳ್ಳಿ | ಚಿರಸ್ತಹಳ್ಳಿ | 30.09.2022 | 8 | ಸಾ.ಅ(ಅಂ.ವಿ) (ಅಂಗವಿಕಲ-blindness &low vision) |
| 9 | ಹಡಗಲಿ | ಬೀರಬ್ಬಿ | 19.12.2022 ರಂದು ಹೊಸದಾಗಿ ಮಂಜೂರಾದ ಗ್ರಾ.ಪಂ.ಗ್ರಂಥಾಲಯಗಳು | 9 | ಪ.ಜಾ(ಮ.ಅ) |
| 10 | ಕೊಟ್ಟೂರು | ಚಿರಬಿ | | 10 | ಸಾ.ಅ(ಮ.ಅ) |
| 11 | ಹಗರಿಬೊಮ್ಮನಹಳ್ಳಿ | ಗದ್ದಿಕೇರಿ | | 11 | ಪ್ರವರ್ಗ-2(ಬಿ) |
| 12 | ಹರಪನಹಳ್ಳಿ | ಕಡತಿ | | 12 | ಸಾ.ಅ(ಗ್ರಾ.ಅ) |
| 13 | ಕೂಡ್ಲಿಗಿ | ಕಕ್ಕುಪ್ಪಿ | | 13 | ಪ್ರವರ್ಗ-2(ಎ)(ಮ.ಅ) |
| 14 | ಹಡಗಲಿ | ಕೆ.ಅಯ್ಯನಹಳ್ಳಿ | | 14 | ಸಾ.ಅ |
| 15 | ಹಗರಿಬೊಮ್ಮನಹಳ್ಳಿ | ಮಾದೂರು | | 15 | ಪ.ಜಾ(ಗ್ರಾ.ಅ) |
| 16 | ಕೊಟ್ಟೂರು | ನಾಗರಕಟ್ಟೆ | | 16 | ಸಾ.ಅ(ಮ.ಅ) |
| 17 | ಹಗರಿಬೊಮ್ಮನಹಳ್ಳಿ | ನೆಲ್ಕುದ್ರಿ-1 | | 17 | ಪ್ರವರ್ಗ-3ಎ |
| 18 | ಹಗರಿಬೊಮ್ಮನಹಳ್ಳಿ | ವಲ್ಲಭಾಪುರ | | 18 | ಪ.ಪಂ.(ಮ.ಅ) |
| 19 | ಕೊಟ್ಟೂರು | ಕಾಳಾಪುರ | 31.05.2023 | 19 | ಪ್ರವರ್ಗ 3(ಬಿ) |
| 20 | ಹರಪನಹಳ್ಳಿ | ತೌಡೂರು | 31.05.2023 | 20 | ಸಾ.ಅ(ಗ್ರಾ.ಅ) |
| 21 | ಕೂಡ್ಲಿಗಿ | ಬಣವಿಕಲ್ಲು | 30.06.2023 | 21 | ಪ್ರವರ್ಗ 2 (ಎ)(ಗ್ರಾ.ಅ) |
| 22 | ಕೂಡ್ಲಿಗಿ | ಹೊಸಹಳ್ಳಿ | 31.07.2023 | 22 | ಸಾ.ಅ(ಮಾ. ಸೈ ) |

ಈ ಮೇಲಿನ ಕೋಷ್ಟಕದಲ್ಲಿ ನೀಡಿರುವ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳುವುದು.

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಟ ಜಾತಿ | SC | Scheduled Caste |
| ಪ.ಪಂ | ಪರಿಶಿಷ್ಟ ಪಂಗಡ | ST | Scheduled Tribe |
| ಪ್ರ-1 | ಪ್ರವರ್ಗ-1 | Cat-1 | Category-1 |
| 2ಎ | ಪ್ರವರ್ಗ-2ಎ | 2A | Category-2A |
| 2ಬಿ | ಪ್ರವರ್ಗ-2ಬಿ | 2B | Category-2B |
| 3ಎ | ಪ್ರವರ್ಗ-3ಎ | 3A | Category-3A |
| 3ಬಿ | ಪ್ರವರ್ಗ-3ಬಿ | 3B | Category-3B |
| ಮಾ.ಸೈ | ಮಾಜಿ ಸೈನಿಕ | Ex-MP | Ex- Military person |
| ಗ್ರಾ.ಅ | ಗ್ರಾಮೀಣ ಅಭ್ಯರ್ಥಿ | Rural | Rural Candidate |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium Student |
| ಅಂ.ವಿ | ಅಂಗವಿಕಲ ಅಭ್ಯರ್ಥಿ | PH | Physically Handicapped |
| ಯೋ.ನಿ.ಅ | ಯೋಜನೆ ನಿರಾಶ್ರಿತ ಅಭ್ಯರ್ಥಿ | PDP | Project Displaced Person |
| ತೃ.ಲಿ | ತೃತೀಯ ಲಿಂಗ | TG | Transgender |

## ಹುದ್ದೆಗಳ ವರ್ಗೀಕರಣ

| ಕ್ರ.ಸಂ | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ | ಅಂ.ವಿ | ಕ.ಮಾ.ಅ | ಯೋ.ನಿ | ತೃ.ಲಿಂ | ಒಟ್ಟು |
|---|---|---|---|---|---|---|---|---|---|---|
| 1 | ಪ.ಜಾ | 1 | 1 | 1 | | | | | | 3 |
| 2 | ಪ.ಪಂ | 1 | 1 | | | | | | | 2 |
| 3 | ಪ್ರ-1 | 1 | | | | | | | | 1 |
| 4 | ಪ್ರ-2ಎ | 1 | 1 | 1 | | | | | | 3 |
| 5 | ಪ್ರ-2ಬಿ | 1 | | | | | | | | 1 |
| 6 | ಪ್ರ-3ಎ | 1 | | | | | | | | 1 |
| 7 | ಪ್ರ-3ಬಿ | 1 | | | | | | | | 1 |
| 8 | ಸಾ.ಅ | 2 | 3 | 3 | 1 | 1 | | | | 10 |
| ಒಟ್ಟು | | 9 | 6 | 5 | 1 | 1 | 0 | 0 | 0 | 22 |

1. **ಶೈಕ್ಷಣಿಕ ವಿದ್ಯಾರ್ಹತೆ:**
    - ದ್ವಿತೀಯ ಪದವಿ ಪೂರ್ವ ಪರೀಕ್ಷೆ(ಪಿ.ಯು.ಸಿ)ಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಪ್ರಮಾಣ ಪತ್ರ ಪಡೆದಿರತಕ್ಕದ್ದು ಹಾಗೂ ಕನಿಷ್ಠ 03 ತಿಂಗಳ ಕಂಪ್ಯೂಟರ್ ಕೋರ್ಸ್ ನಲ್ಲಿ ಉತ್ತೀರ್ಣರಾಗಿರಬೇಕು.
    - ಒಂದು ವೇಳೆ ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಪಿ.ಯು.ಸಿ. ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ಆಧರಿಸಿ ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ಮೀಸಲಾತಿ ಬಿಂದುವಿನಂತೆ ಆಯ್ಕೆಗೆ ಪರಿಗಣಿಸಲಾಗುವುದು.
    - ಈ ವಿದ್ಯಾರ್ಹತೆಯನ್ನು ಅಧಿಸೂಚನೆ ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರಬೇಕು. ವಿದ್ಯಾರ್ಹತೆಯ ದಾಖಲಾತಿಗಳ ನೈಜತೆ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ದೃಢಪಡಿಸಿಕೊಂಡ ನಂತರ ನೇಮಕಾತಿ ಆದೇಶ ನೀಡಲಾಗುವುದು.
    - ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತತ್ಸಮಾನ ವಿದ್ಯಾರ್ಹತೆ ಹೊಂದಿದಲ್ಲಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

2. **ವಾಸಸ್ಥಳ:**
    - ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿಯಾಗಿರತಕ್ಕದ್ದು, ಪರಂತು ಸಂಬಂಧಪಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿವಾಸಿಯ ಲಭ್ಯತೆ ಇಲ್ಲದೇ ಇದ್ದಲ್ಲಿ ಆಯಾ ತಾಲೂಕು ಪಂಚಾಯಿತಿಯ ವ್ಯಾಪ್ತಿಯಲ್ಲಿನ ಬೇರೆ ಗ್ರಾಮ ಪಂಚಾಯತಿಯ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.
    - ಸಕ್ಷಮ ಪ್ರಾಧಿಕಾರವಾದ ತಹಶೀಲ್ದಾರ ಇವರಿಂದ ವಾಸ ಸ್ಥಳ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

3. **ವಯೋಮಿತಿ:**
    - ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ: 08.01.2024** ರಂದು ಅಭ್ಯರ್ಥಿಯು 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯು ಈ ಕೆಳಕಂಡಂತೆ ಇರತಕ್ಕದ್ದು.

| | | |
|---|---|---|
| ಎ | ಸಾಮಾನ್ಯ ವರ್ಗ | 35 ವರ್ಷ |
| ಬಿ | 2ಎ, 2ಬಿ, 3ಎ, 3ಬಿ | 38 ವರ್ಷ |
| ಸಿ | ಪ.ಜಾತಿ/ಪ.ಪಂ.(ಪ್ರ – 1) | 40 ವರ್ಷ |

ಮೇಲ್ಕಂಡ ಗರಿಷ್ಠ ವಯೋಮಿತಿಯಲ್ಲದೆ ಕರ್ನಾಟಕ ನಾಗರೀಕಾ ಸೇವಾ (ಸಾಮಾನ್ಯ ನೇಮಕಾತಿ) ನಿಯಮ 1977ರಲ್ಲಿ ನಿರ್ಧಿಷ್ಟಪಡಿಸಿರುವಂತೆ ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಈ ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

- **ಮಾಜಿ ಸೈನಿಕ:** ಸೇವೆ ಸಲ್ಲಿಸಿರುವಷ್ಟು ವರ್ಷಗಳಿಗೆ 03 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುವೋ ಅಷ್ಟು ವರ್ಷಗಳನ್ನು ವಯೋಮಿತಿಯಲ್ಲಿ ಹೆಚ್ಚಿಸಲಾಗುವುದು.
- **ವಿಧವೆಯಾಗಿದ್ದಲ್ಲಿ:** ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುವುದಿಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿದಲ್ಲಿ 10 ವರ್ಷಗಳನ್ನು ವಯೋಮಿತಿಯಲ್ಲಿ ಹೆಚ್ಚಿಸಲಾಗುವುದು.
- **ಅಂಗವಿಕಲ:** ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ಅಂಗವಿಕಲ ಅಭ್ಯರ್ಥಿಯೆಂದು ಪಡೆದ ಪ್ರಮಾಣ ಪತ್ರ ಸಲ್ಲಿಸಿದಲ್ಲಿ 10 ವರ್ಷಗಳನ್ನು ವಯೋಮಿತಿಯಲ್ಲಿ ಹೆಚ್ಚಿಸಲಾಗುವುದು.
- **National Cadet Corps** ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಗಳಿಗೆ Cadet ಪರಿವೀಕ್ಷಕರಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

**4. ಜನ್ಮ ದಿನಾಂಕ:**

ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) ದಲ್ಲಿ ನಮೂದಿಸಿರುವ ಜನ್ಮ ದಿನಾಂಕವನ್ನು ಆಯ್ಕೆ ಪ್ರಾಧಿಕಾರವು ಪರಿಗಣಿಸುತ್ತದೆ. ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸುವುದಿಲ್ಲ.

**5. ಅರ್ಜಿ ಸಲ್ಲಿಸುವ ವಿಧಾನ:**

- **ಅರ್ಜಿಯನ್ನು ಮುದ್ದಾಂ ಆಗಿ ಸಲ್ಲಿಸುವುದು ಅಥವಾ ನೋಂದಾಯಿತ ಅಂಚೆ(Registered Post) ಮೂಲಕ ಈ ಕೆಳಕಾಣಿಸಿದ ವಿಳಾಸಕ್ಕೆ ಸಲ್ಲಿಸುವುದು**

| |
|---|
| **ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ ಹಾಗೂ<br>ಉಪಕಾರ್ಯದರ್ಶಿಗಳು<br>ಜಿಲ್ಲಾ ಪಂಚಾಯಿತಿ ವಿಜಯನಗರ<br>ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ<br>ಟಿ.ಬಿ.ಡ್ಯಾಂ ರಸ್ತೆ, ಹೊಸಪೇಟೆ- 583225** |

**ಅರ್ಜಿ ಸಲ್ಲಿಸುವ ಅಂಚೆ ಲಕೋಟೆ (postal cover) ಯ ಮೇಲೆ ಕಡ್ಡಾಯವಾಗಿ ಯಾವ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕಾಗಿ ಗಾಗಿ ಅರ್ಜಿ ಸಲ್ಲಿಸುವರೋ ಆ ಗ್ರಾಮ ಪಂಚಾಯಿತಿಯ ಹೆಸರನ್ನು ನಮೂದಿಸುವುದು.**

- **ಅರ್ಜಿಯೊಂದಿಗೆ ಸಲ್ಲಿಸಬೇಕಾದ ಈ ಕೆಳಕಾಣಿಸಿದ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿ (Gazetted Officer) ರವರಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು.**

1. ಪಿ.ಯು.ಸಿ ಅಂಕ ಪಟ್ಟಿ
2. ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿ
3. ಕನಿಷ್ಟ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ
4. ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ
5. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
6. ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
7. ಕನ್ನಡ ಮಾಧ್ಯಮ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
8. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
9. ಅಂಗವಿಕಲರ ಪ್ರಮಾಣ ಪತ್ರ (UDID card) (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
10. ಮಾಜಿ ಸೈನಿಕ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
11. ಯೋಜನಾ ನಿರಾಶ್ರಿತರು ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
12. ತೃತೀಯ ಲಿಂಗ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)

ಅರ್ಜಿ ಸಲ್ಲಿಸುವ ದಿನಾಂಕ:

ಎ) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ : 18.12.2023
ಬಿ) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08.01.2024

7. **ಅರ್ಜಿ ದೊರೆಯುವ ಸ್ಥಳ:**
   - ಜಿಲ್ಲಾ ಪಂಚಾಯಿತಿ ವಿಜಯನಗರ, ಹೊಸಪೇಟೆ ಕಛೇರಿ
   - ವಿಜಯನಗರ ಜಿಲ್ಲಾ ಪಂಚಾಯಿತಿಯ ವೆಬ್‌ಸೈಟ್ ವಿಳಾಸ: **zpvijayanagara.karnataka.gov.in**
   - **ಅರ್ಜಿ ಶುಲ್ಕ : ವಿನಾಯಿತಿಸಲಾಗಿದೆ.**

8. **ಜಾತಿ/ಇತರೆ ಮೀಸಲಾತಿ ಪ್ರಮಾಣ ಪತ್ರ:**
   - **ಜಾತಿ ಪ್ರಮಾಣ ಪತ್ರ**: ನಿಗದಿತ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರರವರಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಡೆ ಪಡೆದಿರಬೇಕು.
   - **ಮಾಜಿ ಸೈನಿಕ/ಗ್ರಾಮೀಣ/ಅಂಗವಿಕಲ/ಕನ್ನಡ ಮಾಧ್ಯಮ** : ಸಂಬಂಧಿಸಿದ ಸಕ್ಷಮ ಪ್ರಾಧಿಕಾರ ನೀಡಿದ ದೃಢೀಕರಣ/ಪ್ರಮಾಣ ಪತ್ರ

9. **ಆಯ್ಕೆ ವಿಧಾನ:**
   - ಶೈಕ್ಷಣಿಕ ಅರ್ಹತೆಯಲ್ಲಿನ ಮೆರಿಟ್ ಮತ್ತು ರೋಸ್ಟರ್ ಮೀಸಲಾತಿ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಒಂದು ವೇಳೆ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ ಅಂಕಗಳನ್ನು/ಮೆರಿಟನ್ನು ಹೊಂದಿದಲ್ಲಿ ವಯಸ್ಸಿನಲ್ಲಿ ಹಿರಿಯರಾದವರನ್ನು ಆಯ್ಕೆಗೆ ಪರಿಗಣಿಸಲಾಗುವುದು.
   - ಹುದ್ದೆಗೆ ಸಂಬಂಧಿಸಿದಂತೆ ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಪಿ.ಯು.ಸಿ. ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಅಂಕಗಳನ್ನು ಆಧರಿಸಿ ಮೀಸಲಾತಿ ಬಿಂದುವಿನಂತೆ ಆಯ್ಕೆಗೆ ಪರಿಗಣಿಸಲಾಗುವುದು. ಒಂದು ವೇಳೆ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ ಅಂಕಗಳನ್ನು/ಮೆರಿಟನ್ನು ಹೊಂದಿದಲ್ಲಿ ವಯಸ್ಸಿನಲ್ಲಿ ಹಿರಿಯರಾದವರನ್ನು ಆಯ್ಕೆಗೆ ಪರಿಗಣಿಸಲಾಗುವುದು.
   - ಗ್ರಾಮ ಪಂಚಾಯಿತಿವಾರು ಬಂದಿರುವ ಅರ್ಜಿಗಳನ್ನು ಮೆರಿಟ್ ಆಧಾರದ ಮೇಲೆ ಖಾಲಿ ಹುದ್ದೆಗಳಿಗೆ (ರೋಸ್ಟರ್ ಬಿಂದುವಿನಂತೆ) ಸಮನಾಗಿ ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರವಾರು ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.
   - ಸರ್ಕಾರದ ಆದೇಶ ಸಂಖ್ಯೆ: RDPR 425 ಜಿಪಅ 2023 ದಿ:16.08.2023ರಂತೆ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತಿ ಮಾಹೆ ಮಾಸಿಕ ಕನಿಷ್ಠ ವೇತನ ರೂ. 15196.72 ಪಾವತಿಸಲಾಗುವುದು.

**ಸಾಮಾನ್ಯ ಸೂಚನೆಗಳು:**

- ಕನಿಷ್ಠ 3 ತಿಂಗಳ ತರಬೇತಿ ಹೊಂದಿದ ಬಗ್ಗೆ ಮಾನ್ಯತೆ ಪಡೆದ ಸಂಸ್ಥೆಯಿಂದ ಗಣಕಯಂತ್ರ ತರಬೇತಿ ಪ್ರಮಾಣ ಪತ್ರ ಸಲ್ಲಿಸುವುದು.
- ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ಕಂಡು ಬಂದಿದ್ದಲ್ಲಿ ನೇಮಕಾತಿಗೆ ಅನರ್ಹರಾಗಿರುತ್ತಾರೆ.
- ಅರ್ಜಿಯಲ್ಲಿ ತಪ್ಪು/ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.
- ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಯಾವುದೇ ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರತಕ್ಕದ್ದು.
- ಅರ್ಜಿಯಲ್ಲಿ ನೀಡುವ ವಿಳಾಸ ಮತ್ತು ಮೊಬೈಲ್ ಸಂಖ್ಯೆಯೇ ಅಂತಿಮವಾಗಿದ್ದು, ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿ ಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

- ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.
- ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆ ಪಟ್ಟಿಯಲ್ಲಿ ಬಂದಿದೆ ಎಂಬುದರ ಆಧಾರದ ಮೇಲೆ ಅಭ್ಯರ್ಥಿಗೆ ನೇಮಕಾತಿಯ ಯಾವುದೇ ಹಕ್ಕು ದೊರೆಯುವುದಿಲ್ಲ.
- ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರಿ ಸೇವೆಯಲ್ಲಿ ಇರುವ ಅಭ್ಯರ್ಥಿಗಳು ತಮ್ಮ ಇಲಾಖೆಯ ಮುಖ್ಯಸ್ಥರ ನಿರಾಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು.
- ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಮುಂದೂಡುವ, ರದ್ದುಗೊಳಿಸುವ ಮತ್ತು ನಿರ್ಬಂಧನೆಗಳನ್ನು ಬದಲಾಯಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರ ಹೊಂದಿರುತ್ತದೆ.
- ಈಗಾಗಲೇ ಪುರುಷ ಮತ್ತು ಮಹಿಳಾ ವ್ಯಕ್ತಿಯು ಎರಡನೆಯ ಮದುವೆಯಾಗಿದ್ದರೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯದಿದ್ದರೆ ಅಂತಹವರು ನೇಮಕಾತಿಗೆ ಅರ್ಹರಾಗಿರುವುದಿಲ್ಲ.
- ಅರ್ಜಿಗಳನ್ನು ನೋಂದಾಯಿತಿ ಅಂಚೆ ಅಥವಾ ಮುದ್ದಾಂ ಆಗಿ ಸಲ್ಲಿಸುವುದು. ಕೊನೆಯ ದಿನಾಂಕ ಮುಗಿದ ನಂತರ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾಗುವ ಅಭ್ಯರ್ಥಿಗಳಿಗೆ ಅಂಚೆ ಹಾಗೂ ಇ-ಮೇಲ್/ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಲಾಗುವುದು. ಕಡ್ಡಾಯವಾಗಿ ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಮೂಲ ದಾಖಲೆಗಳನ್ನು ಸಲ್ಲಿಸತಕ್ಕದ್ದು.
- ನಿಗದಿಪಡಿಸಿದ ದಿನಾಂಕದಂದು ದಾಖಲಾತಿಗಳ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ಅನರ್ಹಗೊಳ್ಳುತ್ತಾರೆ ಹಾಗೂ ಅವರ ಹೆಸರನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಡಲಾಗುವುದು.
- ಅರ್ಜಿಯಲ್ಲಿ ಕೇಳಿರುವ ಪೂರ್ಣ ಮಾಹಿತಿಯನ್ನು ಭರ್ತಿ ಮಾಡಿಲ್ಲದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಲಾಗುವುದು.
- ಅಭ್ಯರ್ಥಿಗಳಿಗೆ ಕನ್ನಡ ಭಾಷೆ ಓದಲು, ಬರೆಯಲು ಮತ್ತು ಅರ್ಥ ಮಾಡಿಕೊಳ್ಳುವ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ ಹಾಗೂ ಸರ್ಕಾರದ ನಿಯಮಾನುಸಾರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ತೇರ್ಗಡೆಯಾಗಿರತಕ್ಕದ್ದು.
- ಹೆಚ್ಚಿನ ವಿವರಗಳಿಗಾಗಿ ವಿಜಯನಗರ ಜಿಲ್ಲೆಯ ವೆಬ್ ಸೈಟ್ **zpvijayanagara.karnataka.gov.in** ರಲ್ಲಿನ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ. ಸ್ಪಷ್ಟೀಕರಣ ಅವಶ್ಯಕವಿದ್ದಲ್ಲಿ ಸಹಾಯವಾಣಿ ಸಂಖ್ಯೆ:9980667345 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
- ಅರ್ಜಿದಾರರು ಮೀಸಲಾತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು.

**ವಿಶೇಷ ಸೂಚನೆ:** ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ. ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಕಡ್ಡಾಯವಾಗಿ ಪಡೆದಿಟ್ಟುಕೊಂಡು, ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ತಪ್ಪಿದ್ದಲ್ಲಿ ಅವರ ಮೀಸಲಾತಿ/ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದಿಲ್ಲ.

(ಭೀಮಪ್ಪ ಲಾಳಿ)
ಆಯ್ಕೆ ಸಮಿತಿ ಸದಸ್ಯ ಕಾರ್ಯದರ್ಶಿ
ಹಾಗೂ ಉಪಕಾರ್ಯದರ್ಶಿ
ಜಿಲ್ಲಾ ಪಂಚಾಯಿತಿ ವಿಜಯನಗರ

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಲ್ಲು ಕಟ್ಟಡ, ಕಾಳಿದಾಸ ರಸ್ತೆ, ಕೆ.ಜಿ.ರೋಡ್ ಜಂಕ್ಷನ್, ಗಾಂಧಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

3. ಜಿಲ್ಲಾ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ಪಂಚಾಯಿತಿ ವಿಜಯನಗರ ಇವರಿಗೆ ಜಿಲ್ಲಾ ಪಂಚಾಯತಿ ವೆಬ್ ಸೈಟ್ ನಲ್ಲಿ ಪ್ರಕಟಿಸಲು.

4. ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯಿತಿ ಹಗರಿಬೊಮ್ಮನಹಳ್ಳಿ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ಕೊಟ್ಟೂರು ಇವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಸದರಿ ಅಧಿಸೂಚನೆಯನ್ನು ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

5. ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಸದರಿ ಅಧಿಸೂಚನೆಯನ್ನು ಗ್ರಾಮ ಪಂಚಾಯಿತಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಗ್ರಾಮ ಪಂಚಾಯಿತಿಯ ಚುನಾಯಿತಿ ಪ್ರತಿನಿಧಿಗಳ ಗಮನಕ್ಕೆ ತಂದು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ವ್ಯಾಪಕ ಪ್ರಚಾರಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ)

# ಜಿಲ್ಲಾ ಪಂಚಾಯಿತಿ ವಿಜಯನಗರ
# ಗ್ರಾಮ ಪಂಚಾಯಿತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಹುದ್ದೆಯ ಅರ್ಜಿ ನಮೂನೆ

ಇತ್ತೀಚಿನ ಪಾಸ್ ಪೋರ್ಟ್ ಸೈಜ್ ಫೋಟೋ ಅಂಟಿಸುವುದು

ಅರ್ಜಿ ಸಲ್ಲಿಸಲು ಇಚ್ಛಿಸಿರುವ ಗ್ರಾಮ ಪಂಚಾಯಿತಿಯ ಹೆಸರು:

______________________________

| | | | | |
|---|---|---|---|---|
| 1 | ಅಭ್ಯರ್ಥಿಯ ಹೆಸರು(SSLC ಅಂಕ ಪಟ್ಟಿಯನ್ವಯ) | | | |
| 2 | ತಂದೆ/ಗಂಡನ ಹೆಸರು | | | |
| 3 | ಹುಟ್ಟಿದ ದಿನಾಂಕ (DD/MM/YY) | | | |
| a | ವಯಸ್ಸು (SSLC ಅಂಕ ಪಟ್ಟಿಯನ್ವಯ) | | | |
| 4 | ಜಾತಿ | | | |
| a | ಪ್ರವರ್ಗ/ಕೆಟಗರಿ | | | |
| 5 | ಪುರುಷ/ಮಹಿಳೆ/ತೃತೀಯ ಲಿಂಗ | | | |
| 6 | ವಾಸಸ್ಥಳ (ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರದನ್ವಯ) | | | |
| 7 | ಖಾಯಂ ಅಂಚೆ ವಿಳಾಸ | | | |
| a | ಸಂಪರ್ಕಿಸುವ ಅಂಚೆ ವಿಳಾಸ | | | |
| b | ಮೊಬೈಲ್ ಸಂಖ್ಯೆ | | | |
| 8 | ವಿದ್ಯಾರ್ಹತೆ | | | |
| a | ಪಿ.ಯು.ಸಿ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿದ ವರ್ಷ | (YYYY) | | |
| i | ಪಿ.ಯು.ಸಿ ಯಲ್ಲಿ ಗಳಿಸಿದ ಅಂಕಗಳು (eg 425/600, 70.83%) | ಪಡೆದ ಅಂಕ | ಒಟ್ಟು ಅಂಕ | ಶೇಕಡಾ (%) |
| | | | | |

| | | | |
|---|---|---|---|
| b | ಸರ್ಟಿಫಿಕೇಶನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಪ್ರಮಾಣ ಪತ್ರ ಪಡೆದ ದಿನಾಂಕ | (DD/MM/YY) | |
| c | 3 ತಿಂಗಳ ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರವನ್ನು ಪಡೆದ ದಿನಾಂಕ | (DD/MM/YY) | |
| 9 | ಈ ಕೆಳಗಿನ ಪ್ರಮಾಣ ಪತ್ರಗಳನ್ನು ಲಗತ್ತಿಸಿದೆಯೇ? | | |
| a | ಪಿ.ಯು.ಸಿ ವಿದ್ಯಾರ್ಹತೆಯ ಪ್ರಮಾಣ ಪತ್ರ | ಹೌದು/ಇಲ್ಲ | |
| b | ಸರ್ಟಿಫಿಕೇಶನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಪಡೆದ ಪ್ರಮಾಣ ಪತ್ರ | ಹೌದು/ಇಲ್ಲ | |
| c | 3 ತಿಂಗಳ ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರ | ಹೌದು/ಇಲ್ಲ | |
| d | ಎಸ್.ಎಸ್.ಎಲ್.ಸಿ ಅಂಕಪಟ್ಟಿ | ಹೌದು/ಇಲ್ಲ | |
| e | ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ | ಹೌದು/ಇಲ್ಲ | |
| f | ಜಾತಿ ಮತ್ತು ಆದಾಯ ಪ್ರಮಾಣ ಪತ್ರ | ಹೌದು/ಇಲ್ಲ | |
| g | ಕನ್ನಡ ಮಾಧ್ಯಮ ಪ್ರಮಾಣ ಪತ್ರ | ಹೌದು/ಇಲ್ಲ | |
| h | ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ | ಹೌದು/ಇಲ್ಲ | |
| i | ಅಂಗವಿಕಲರ ಪ್ರಮಾಣ ಪತ್ರ (UDID card) | ಹೌದು/ಇಲ್ಲ | |
| j | ಮಾಜಿ ಸೈನಿಕ ಪ್ರಮಾಣ ಪತ್ರ | ಹೌದು/ಇಲ್ಲ | |
| k | ಯೋಜನಾ ನಿರಾಶ್ರಿತರು ಪ್ರಮಾಣ ಪತ್ರ | ಹೌದು/ಇಲ್ಲ | |
| l | ತೃತೀಯ ಲಿಂಗ ಪ್ರಮಾಣ ಪತ್ರ | ಹೌದು/ಇಲ್ಲ | |

ಈ ಮೇಲಿನಂತೆ ನಮೂದಿಸಲಾದ ಎಲ್ಲಾ ವಿವರಗಳು ಸರಿಯಾಗಿವೆ ಎಂದು ಈ ಮೂಲಕ ಪ್ರಮಾಣ ಪೂರ್ವಕವಾಗಿ ದೃಢೀಕರಿಸಿ ಸಹಿ ಮಾಡಿರುತ್ತೇನೆ ಹಾಗೂ ಈ ಮೇಲಿನಂತೆ ಸಲ್ಲಿಸಲಾದ ಮಾಹಿತಿಯು ತಪ್ಪಾಗಿದ್ದಲ್ಲಿ ನನ್ನನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದು ನಾನು ತಿಳಿದಿದ್ದೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ

**ದಿನಾಂಕ:**

**ಸ್ಥಳ:**

## ಸೂಚನೆಗಳು

- ಅರ್ಜಿಯನ್ನು ಸಂಪೂರ್ಣವಾಗಿ ಭರ್ತಿ ಮಾಡತಕ್ಕದ್ದು.
- **ಅರ್ಜಿಯನ್ನು ಮುದ್ದಾಂ ಆಗಿ ಸಲ್ಲಿಸುವುದು ಅಥವಾ ನೋಂದಾಯಿತ ಅಂಚೆ(Registered Post) ಮೂಲಕ ಈ ಕೆಳಕಾಣಿಸಿದ ವಿಳಾಸಕ್ಕೆ ಸಲ್ಲಿಸುವುದು**

| |
|---|
| **ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ ಹಾಗೂ ಉಪಕಾರ್ಯದರ್ಶಿಗಳು<br>ಜಿಲ್ಲಾ ಪಂಚಾಯಿತಿ ವಿಜಯನಗರ<br>ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ<br>ಟಿ.ಬಿ.ಡ್ಯಾಂ ರಸ್ತೆ, ಹೊಸಪೇಟೆ- 583225** |

**ಅರ್ಜಿ ಸಲ್ಲಿಸುವ ಅಂಚೆ ಲಕೋಟೆ (postal cover) ಯ ಮೇಲೆ ಕಡ್ಡಾಯವಾಗಿ ಯಾವ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕಾಗಿ ಗಾಗಿ ಅರ್ಜಿ ಸಲ್ಲಿಸುವರೋ ಆ ಗ್ರಾಮ ಪಂಚಾಯಿತಿಯ ಹೆಸರನ್ನು ನಮೂದಿಸುವುದು.**

- **ಆಯಾ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರಕ್ಕೆ ನಿಗದಿಯಾದ ಮೀಸಲಾತಿಯಡಿ ಸಲ್ಲಿಕೆಯಾದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು**
- **ಆಯಾ ಗ್ರಾಮ ಪಂಚಾಯಿತಿಯ ಸ್ಥಳೀಯರಿಗೆ ಮೊದಲ ಆದ್ಯತೆ. ನಿಗಧಿತ ಮೀಸಲಾತಿ ಉಳ್ಳ ಸ್ಥಳೀಯರು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಮಾತ್ರ ಆ ತಾಲೂಕು ಪಂಚಾಯಿತಿ ವ್ಯಾಪ್ತಿಯ ಬೇರೆ ಗ್ರಾಮ ಪಂಚಾಯಿತಿಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.**

- **ಅರ್ಜಿಯೊಂದಿಗೆ ಸಲ್ಲಿಸಬೇಕಾದ ಈ ಕೆಳಕಾಣಿಸಿದ ದಾಖಲಾತಿಗಳನ್ನು ಪತ್ರಾಂಕಿತ ಅಧಿಕಾರಿ (Gazetted Officer) ರವರಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು.**

1. ಪಿ.ಯು.ಸಿ ಅಂಕ ಪಟ್ಟಿ
2. ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್ ನಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿ
3. ಕನಿಷ್ಟ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ
4. ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ
5. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
6. ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
7. ಕನ್ನಡ ಮಾಧ್ಯಮ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
8. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
9. ಅಂಗವಿಕಲರ ಪ್ರಮಾಣ ಪತ್ರ (UDID card) (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
10. ಮಾಜಿ ಸೈನಿಕ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
11. ಯೋಜನಾ ನಿರಾಶ್ರಿತರು ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
12. ತೃತೀಯ ಲಿಂಗ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)